# ಕಥಾಮಂಟಪ

ಖುಷಿ ಓದಿಗಾಗಿ....

೩



ಜನವರಿ–ಫೆಬ್ರವರಿ–ಮಾರ್ಚ್–೨೦೧೭–೧೮


ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2017-18 Project
is Supported by Many
Individual Donors

ಈ ಸಲದ

# ಕಥೆಗಳು......


* ನರಿಯ ಉಪಾಯ ೪

* ಹುಲಿ ಮತ್ತು ಬಿರುಗಾಳಿ ೧೮

* ಅತಿ ಆಸೆ ಗತಿಗೇಡು ೨೭

* Ziggie Wanders off ೩೧

# ನರಿಯ ಉಪಾಯ





ಒಂದು ಹಳ್ಳಿಯಲ್ಲಿ ಅಪ್ಪಣ್ಣ ಶೆಟ್ಟಿ ಎಂಬ ವ್ಯಾಪಾರಿ ಇದ್ದ. ಅವನು ವಾರಕ್ಕೆ ಒಂದು ಸಾರಿ ತನ್ನ ಹಳ್ಳಿಗೆ ನಾಲ್ಕು ಮೈಲಿ ಸಂತೆಗೆ ಹೋಗಿ, ತನ್ನ ಅಂಗಡಿಗೆ ಬೇಕಾದ ಸಾಮಾನುಗಳನ್ನು ಕೊಂಡು ತಂದು ವ್ಯಾಪಾರ ಮಾಡುತ್ತಾ ಜೀವನ ಮಾಡುತ್ತಿದ್ದ.

ಮಕ್ಕಳಿಗಾಗಿ

ಹೀಗೆ ಒಂದು ದಿನ ಅಪ್ಪಣ್ಣ ಶೆಟ್ಟಿ ಸಂತೆಗೆ ಹೊರಟ. ಅವನು ಇದ್ದ

ಹಳ್ಳಿಯಿಂದ ಬೇರೆ ವಾಹನ ಸೌಕರ್ಯ ಇಲ್ಲದ್ದರಿಂದ ನಡದೇ ಹೋಗಬೇಕಾಗಿತ್ತು. ಅಪ್ಪಣ್ಣ ಶೆಟ್ಟಿ ಹೆಗಲ ಮೇಲೆ ಚೀಲ ಹಾಕಿಕೊಂಡು ಹೊರಟ. ಬಂಡಿ ದಾರಿಯಲ್ಲಿ ಹೋದರೆ ಬಳಸು ದಾರಿ ಆಗುತ್ತದೆ ಎಂದು ಕೆರೆಯ ಅಂಗಳದ ಮೂಲಕ ಹೊರಟ. ಕೆರೆಯಲ್ಲಿನ ನೀರು ಕಡಿಮೆ ಆಗಿದ್ದರಿಂದ ಕೆರೆಯ ಅಂಗಳದ ಮೂಲಕ ಹೋದರೆ ಸಂತೆ ದಾರಿ ಸಮೀಪ ಆಗುತ್ತಿತ್ತು. ಅಪ್ಪಣ್ಣ ಶೆಟ್ಟಿ ಕೆರೆಯ ಅಂಗಳದ ಮೂಲಕ ಹೋಗುತ್ತಿರುವಾಗ, ಇಲ್ಲಿಯವರೆಗೂ ಕೆರೆಯ ನೀರಿನಲ್ಲಿ ಜೀವಿಸುತ್ತಿದ್ದ ಮೊಸಳೆಯೊಂದು ಆಕ್ರಂದನ ಮಾಡುತ್ತಿದ್ದುದನ್ನು ನೋಡಿದ. ಬೋಳೆ

ಸ್ವಭಾವದ ಶೆಟ್ಟಿಗೆ ಮೊಸಳೆಯ ಬಗ್ಗೆ ಕನಿಕರ ಮೂಡಿತು. ಹತ್ತಿರಕ್ಕೆ ಹೋಗಿ ಮೊಸಳೆಯನ್ನು ಮಾತನಾಡಿಸಿದ. ಅದು "ಅಪ್ಪಾ... ಶೆಟ್ಟಿ, ಇಲ್ಲಿಯವರೆಗೂ ಕೆರೆ ತುಂಬಿದ್ದರಿಂದ ಕೆರೆಯಲ್ಲಿನ ಮೀನುಗಳನ್ನು ತಿನ್ನುತ್ತಾ ಸುಖವಾಗಿದ್ದೆ. ಈಗ ಬರ ಬಂದು ಕೆರೆ ಬತ್ತಿದೆ. ನನಗೆ ಜೀವನಕ್ಕೆ ಕಷ್ಟವಾಗಿದೆ. ನನ್ನನ್ನು ತೆಗೆದುಕೊಂಡು ಹೋಗಿ ಎಲ್ಲಿಯಾದರೂ ನೀರಿರುವ ಜಾಗದಲ್ಲಿ ಬಿಟ್ಟು, ಪುಣ್ಯವನ್ನು ಕಟ್ಟಿಕೋ" ಎಂದು ಗೋಳಾಡಿತು.

ಕನಿಕರಿಸಿದ ಶೆಟ್ಟಿ, ಮೊಸಳೆಯನ್ನು ತನ್ನ ಹೆಗಲ ಮೇಲಿದ್ದ ಚೀಲದಲ್ಲಿ ತುಂಬಿಕೊಂಡು ಹೊತ್ತು

ತಂದ. ಸಂತೆ ನಡೆಯುವ ಜಾಗದ ಬಳಿಯೇ ಒಂದು ಸಣ್ಣ ಕೆರೆ ಇತ್ತು. ಅದರಲ್ಲಿನ ನೀರು ಖಾಲಿಯಾಗಿರಲಿಲ್ಲ. ಈ ಕೆರೆಗೆ ಮೊಸಳೆಯನ್ನು ಬಿಡೋಣವೆಂದು ಶೆಟ್ಟಿ ಹೊತ್ತು ತಂದ ಮೊಸಳೆಯನ್ನು ಕೆರೆಯ ದಂಡೆಯಲ್ಲಿ ಇಳಿಸಿ, ಮೊಸಳೆಗೆ ನೀರಿಗೆ ಹೋಗಲು ತಿಳಿಸಿದ. ಆದರೆ ಮೊಸಳೆ – "ಅಪ್ಪಾ... ಶೆಟ್ಟಿ, ಅಲ್ಲಿಂದ ಇಲ್ಲಿಗೆ ಹೊತ್ತು ತಂದು ಪುಣ್ಯ ಕಟ್ಟಿಕೊಂಡಿದ್ದೀಯಾ. ನನ್ನನ್ನು ತೆಗೆದುಕೊಂಡು ಹೋಗಿ ನೀರಲ್ಲಿ ಬಿಟ್ಟು ಉಪಕಾರ ಮಾಡು" ಎಂದು ಬೇಡಿಕೊಂಡಿತು.

ಶೆಟ್ಟಿ ಮೊಸಳೆಯನ್ನು ಹೊತ್ತುಕೊಂಡು, ಮೊಣಕಾಲು ಉದ್ದದ ನೀರಿಗೆ ಬಿಟ್ಟು, "ಸುಖವಾಗಿ

ಬದುಕಿಕೋ, ಇನ್ನು ನಾನು ಹೋಗುತ್ತೇನೆ” ಎಂದು ಹೇಳಿ ಹೊರಟ. ಆದರೆ ಮೊಸಳೆ ತಕ್ಷಣವೇ ಶೆಟ್ಟಿಯ ಕಾಲು ಹಿಡಿದುಕೊಂಡು ನೀರಿಗೆ ಸೆಳೆಯುತೊಡಗಿತು. ಶೆಟ್ಟಿ ಗಾಬರಿಯಾದ. ಮೊಸಳೆಗೆ ಉಪಕಾರ ಮಾಡಿದರೆ ಇದೇನಿದು ಅಪಕಾರ ಮಾಡುತ್ತಿದೆ ಎಂದುಕೊಂಡು– “ಅಯ್ಯಾ ಮೊಸಳೆ, ನಿನಗೆ ಇದು ನ್ಯಾಯವೇ?” ಎಂದು ಕೇಳಿದರೂ ಅದು ಮಾತನಾಡದೆ, ತನ್ನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿತು. ಮೊಸಳೆ ನೀರಿನಲ್ಲಿ ಇದ್ದುದರಿಂದ ಅದಕ್ಕೆ ಭೀಮಬಲ ಬಂದಿತ್ತು. ಶೆಟ್ಟಿ ‘ತಾನು ಎಂಥಾ ಅವಿವೇಕದ ಕೆಲಸವನ್ನು ಮಾಡಿಕೊಂಡೆ’ ಎಂದು ದಿಕ್ಕು ಕಾಣದೆ

ಕಂಗಾಲಾದ. ಅಷ್ಟರಲ್ಲಿ ಕೆರೆಯ ಬಯಲಿಗೆ ಒಂದು ಎತ್ತು ಬಂತು. ಅದನ್ನು ನೋಡುತ್ತಲೇ ಶೆಟ್ಟಿಗೆ ಜೀವ ಬಂದಂತಾಯಿತು. ಆಗ ಶೆಟ್ಟಿ– "ಅಯ್ಯಾ ಮೊಸಳೆ, ಇಲ್ಲಿ ಒಂದು ಬಸವಣ್ಣ ಬಂದಿದೆ. ಅದು ದೇವರಿದ್ದ ಹಾಗೆ. ಅದನ್ನು ನ್ಯಾಯ ಕೇಳೋಣ. ಅದು ತಿನ್ನು ಅಂದರೆ ತಿನ್ನು" ಎಂದು ಮೊಸಳೆಗೆ ಹೇಳಿ, ಎತ್ತನ್ನು (ಬಸವಣ್ಣ) ಹತ್ತಿರ ಕರೆದು ವಿಷಯ ತಿಳಿಸಿದ.

ಬಸವಣ್ಣ ನಗುತ್ತಾ – "ಈ ಮಾನವರ ಮಾಯೆ ಯಾರಿಗೂ ತಿಳಿಯೊಲ್ಲ. ಇವರು ಮಹಾ ಸ್ವಾರ್ಥಿಗಳು, ಇವರನ್ನು ನಂಬಬೇಡ. ೦ು´ುಾ ಕಿ ೦ ದ´ ರಿ ನಾ ನ´ು ಶಕ್ತಿಶಾಲಿಯಾಗಿದ್ದಾಗ ನನ್ನನ್ನು ಚೆನ್ನಾಗಿ

ದುಡಿಸಿಕೊಂಡರು. ಈಗ ನನಗೆ ವಯಸ್ಸಾಗಿದೆ ಎಂದು ಹುಲ್ಲು–ನೀರು ಹಾಕದೆ ಈ ಕೆರೆ ಬಯಲಿಗೆ ಓಡಿಸಿದ್ದಾರೆ. ಈ ಮನುಷ್ಯರು ಬಹಳ ಸ್ವಾರ್ಥಿಗಳು, ಬಿಡಬೇಡ ಮೊಸಳೆ” ಎಂದು ನ್ಯಾಯ ತೀರ್ಮಾನ ಕೊಟ್ಟು ಹೊರಟಿತು.

ಮೊಸಳೆಗೆ ಈ ನ್ಯಾಯದಿಂದ ಇನ್ನಷ್ಟು ಬೆಂಬಲ ದೊರೆತಂತಾಗಿ ಶೆಟ್ಟಿಯನ್ನು ನೀರಿನತ್ತ ಎಳೆಯುತೊಡಗಿತು. ಶೆಟ್ಟಿ ಅಸಹಾಯಕನಾಗಿ ನೋಡುತ್ತಾ ಇರುವಾಗ ಕೆರೆಯ ಬಯಲಿನಲ್ಲಿ ಕುದುರೆಯೊಂದು ಕಾಣಿಸಿಕೊಂಡಿತು.

ಶೆಟ್ಟಿಗೆ ಮತ್ತೆ ಜೀವ

ಬಂದಂತಾಗಿ, “ಅಪ್ಪಾ ಮೊಸಳೆರಾಜ, ಅಲ್ಲಿ ಒಂದು ಕುದುರೆ ಬರ್ತಾ ಇದೆ. ನೀನು ಮಾಡೋದು ನ್ಯಾಯಾನ ಅಂತ ಕುದುರೇನ ಕೇಳೋಣ. ಆಮೇಲೆ ನಿನಗೆ ತಿಳಿದಂಗೆ ಮಾಡು” ಎಂದು ಮೊಸಳೆಯನ್ನು ಬೇಡಿಕೊಂಡ.

ಹತ್ತಿರಕ್ಕೆ ಬಂದ ಕುದುರೆಗೆ ಶೆಟ್ಟಿ ವಿಷಯ ತಿಳಿಸಿ, ನ್ಯಾಯ ಕೇಳಿದ. ಕುದುರೆ ಹೇಷಾರವ ಮಾಡುತ್ತಾ – “ಈ ಮಾನವರು ಮಹಾ ವಂಚಕರು, ಮೋಸಗಾರರು. ನನ್ನ ಮೈಯಾಗೆ ಶಕ್ತಿ ಇದ್ದಾಗ ಎಲ್ಲರೂ ಹತ್ತಿ ಸವಾರಿ ಮಾಡೋರೆ. ಹುಲ್ಲು–ಹುರುಳಿ ಹಾಕೋರೆ. ಆದರೆ ನನಗೆ ವಯಸ್ಸಾಗುತ್ತ ಬಂತಲ್ಲ, ನನ್ನ ಮೂಲೆಗುಂಪು ಮಾಡಿದರು. ಒಂದು

ಹಿಡಿ ಹುಲ್ಲು ತೋರಿಸಲಿಲ್ಲ ಈ ಜನ. ಇವರನ್ನ ನಂಬಬೇಡ. ಇವರು ಮಹಾ ಸಮಯಸಾಧಕರು. ಶೆಟ್ಟಿನ ಬಿಡಬೇಡ" ಎಂದು ಹೇಳಿ ಹೊರಟು ಹೋಯಿತು. ಮೊಸಳೆಗೆ ಖುಷಿಯಾಗಿ ಮತ್ತಷ್ಟು ರಭಸದಿಂದ ಎಳೆಯಲು ಪ್ರಾರಂಭಿಸಿತು. ಶೆಟ್ಟಿ ತನ್ನ ಪ್ರಾಣದ ಮೇಲಿನ ಆಸೆ ಬಿಟ್ಟು, ಪಾಲಿಗೆ ಬಂದದ್ದು ಪಂಚಾಮೃತ, ಮಾಡಿದ್ದುಣ್ಣೋ ಮಹಾರಾಯ' ಎಂದುಕೊಳ್ಳುತ್ತಾ 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ದೇವರ ಧ್ಯಾನ ಮಾಡತೊಡಗಿದ.

ಮುಳುಗುವವನಿಗೆ ಹುಲ್ಲುಕಡ್ಡಿ ದೊರೆತಂತೆ, ಕೆರೆಯ ಬಯಲಿನಲ್ಲಿ ಒಂದು ನರಿ ಕಾಣಿಸಿಕೊಂಡಿತು.

ಕೊನೆಯ ಬಾರಿಗೆ ಇದರ ನ್ಯಾಯ ತೀರ್ಮಾನವನ್ನೂ ಕೇಳಿಬಿಡೋಣ, ನಂತರ ದೇವರು ಇಟ್ಟಂತೆ ಆಗಲಿ ಎಂದು – "ಅಯ್ಯಾ ಮೊಸಳೆರಾಜ, ಒಂದು ನರಿ ಬಂದಿದೆ. ಅದನ್ನ ನ್ಯಾಯ ಕೇಳೋಣ, ಅದು ಹ್ಯಾಗೆ ಹೇಳುತ್ತದೆಯೋ ಹಾಗೆ. ಅದರೆ ತೀರ್ಮಾನ ಒಂದು ಕೇಳಿ, ನಂತರ ಬೇಕಾದರೆ ನೀನು ನನ್ನನ್ನು ತಿನ್ನು" ಎಂದು ಶೆಟ್ಟಿ ಮೊಸಳೆಯ ಒಪ್ಪಿಗೆ ಪಡೆದು ನರಿಯನ್ನು ಹತ್ತಿರಕ್ಕೆ ಕರೆದು ವಿಷಯ ತಿಳಿಸಿದ. ನರಿಗೆ ಪರಿಸ್ಥಿಯ ಗಂಭೀರತೆ ಅರ್ಥವಾಯಿತು. ಮೊಸಳೆಯಂಥ ಅಪಾಯಕಾರಿ ಪ್ರಾಣಿಯ ಕೈಗೆ ಸಿಕ್ಕು ಹಾಕಿಕೊಂಡ ಪೆದ್ದ ಶೆಟ್ಟಿಯನ್ನು ಹೇಗಾದರೂ ಮಾಡಿ

ಉಳಿಸಬೇಕೆಂದು ಸಂಚು ಹೂಡಿತು.

"ಅಪ್ಪಾ, ನೀವು ಏನು ಹೇಳ್ತೀರೋ ನನಗೆ ಒಂದೂ ಕೇಳಿಸ್ತಾನೇ ಇಲ್ಲ. ವಯಸ್ಸಾಗಿದೆ, ಕಿವಿ ಬೇರೆ ಕೇಳ್ಸಲ್ಲ, ಸ್ವಲ್ಪ ಹತ್ತಿರಕ್ಕೆ ಬನ್ನಿ, ನಿಮ್ಮ ಸಮಸ್ಯೆ ಅದೇನಿದ್ದರೂ ಬಗೆಹರಿಸೋಣ, ಈ ನರ ಮನುಸುರನ ನಂಬೋಕೆ ಆಗಲ್ಲ" ಎಂದು ನರಿ ಸೋಗು ಹಾಕಿತು. ಮೊಸಳೆ ಪಟ್ಟು ಸಡಿಲಿಸಿತು.

ಶೆಟ್ಟಿ ನರಿಯ ಸ್ವಲ್ಪ ಹತ್ತಿರಕ್ಕೆ ಬಂದು ವಿಷಯ ತಿಳಿಸಿದ. ನರಿ ಆಗಲೂ ಕಿವಿ ಕೇಳಿಸುತ್ತಿಲ್ಲ ಎಂಬ ನಾಟಕವಾಡಿ ಇನ್ನಷ್ಟು ಹತ್ತಿರಕ್ಕೆ ಕರೆದಾಗ, ಮೊಸಳೆ ಶೆಟ್ಟಿಯ ಸಮೇತ ದಂಡೆಗೆ ಬಂತು. ನರಿ ಭಾರೀ ಗಾತ್ರದ

ಮೊಸಳೆಯನ್ನು ನೋಡಿ ಬೆಚ್ಚಿತು. ಈಗ ಅದು ಮತ್ತೊಂದು ಆಲೋಚನೆ ಮಾಡಿ, "ಈಗ ಹೇಳು" ಎಂದು ಶೆಟ್ಟಿಯನ್ನು ಕೇಳಿತು. ಶೆಟ್ಟಿ ನಡೆದ ಕತೆಯನ್ನೆಲ್ಲಾ ಸವಿವರವಾಗಿ ತಿಳಿಸಿದ.
"ಅಯ್ಯಾ ಶೆಟ್ಟಿ, ನಿನ್ನ ಮಾತು ನಂಬೋಕೆ ಆಗಲ್ಲ. ಇದು ಭಾರೀ ಗಾತ್ರದ ಮೊಸಳೆ. ಇದನ್ನ ನೀನು ಅದು ಹೇಗೆ ತಂದೆ? ಇದು ಯಾವ ಚೀಲದಲ್ಲಿ ಹಿಡಿಸುತ್ತೆ? ಒಂದು ಪಕ್ಷ ಹಿಡಿಸಿದರೂ ಇದನ್ನು ನೀನು ಹೊತ್ತು ತಂದೆ ಎಂದರೆ ನಂಬೋಕೆ ಆಗಲ್ಲ" ಎಂದು ನರಿ ತನ್ನ ವರಸೆ ಬದಲಾಯಿಸಿತು. ಶೆಟ್ಟಿ ಅಲ್ಲೇ ಹಾಕಿದ್ದ ಚೀಲವನ್ನು ತೋರಿಸಿ, "ಇದೇ ಚೀಲದಲ್ಲಿ ತಂದಿದ್ದು" ಎಂದ. ಆದರೆ ನರಿ ನಂಬದೆ, "ನಾನು ಬರೀ ನಿಮ್ಮ

ಬಾಯಿ ಮಾತಿಗೆ ಒಪ್ಪೋನಲ್ಲ. ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು ಅನ್ನೋ ಗುಣದೋನು ನಾನು. ಅಪ್ಪಾ.. ಶೆಟ್ಟಿ, ನಿನ್ನ ಚೀಲದಲ್ಲಿ ಮೊದಲು ಮೊಸಳೆ ಹಾಕಿ ನನಗೆ ತೋರಿಸು, ನೋಡೋಣ" ಎಂದಿತು. ಶೆಟ್ಟಿ ಮೊಸಳೆಯನ್ನು ಚೀಲದಲ್ಲಿ ಹಾಕಿ, ಚೀಲದ ಬಾಯಿ ಕಟ್ಟಿದ. "ಎಲ್ಲಿ ಮೊಸಳೆ ಹೊತ್ತುಕೋ, ನೋಡೋಣ" ಎಂದ ನರಿ ಶೆಟ್ಟಿಯನ್ನು, ಮೊಸಳೆ ಮೊದಲು ಇದ್ದ ಜಾಗಕ್ಕೆ ಕರೆ ತಂದಿತು. "ಎಲ್ಲಿ ಚೀಲದ ಬಾಯಿ ಬಿಚ್ಚಿ ಮೊಸಳೆಯನ್ನು ಹೊರಗೆ ಬಿಡು" ಎಂದಿತು ನರಿ. ಶೆಟ್ಟಿ ಹಾಗೇ ಮಾಡಿದ.

"ಅಯ್ಯೋ ಪೆದ್ದ ಶೆಟ್ಟಿ, ಮೊಸಳೆ ದುಷ್ಟ ಪ್ರಾಣಿ ಅಂತ

ಗೊತ್ತಿದ್ದೂ ಅದಕ್ಕೆ ಸಹಾಯ ಮಾಡಲು ಹೋದುದು ನಿನ್ನ ದಡ್ಡತನವೆನ್ನಬೇಕೋ, ಒಳ್ಳೆಯತನ ಎನ್ನಬೇಕೋ ತಿಳಿಯುತ್ತಿಲ್ಲ. ದುಷ್ಟರಿಗೆ ಉಪಕಾರ ಮಾಡಿದರೆ ಅವರು ಅಪಕಾರವನ್ನೇ ಮಾಡುತ್ತಾರೆ ಅಂತ ಈಗಲಾದರೂ ತಿಳಿ. ಇನ್ನು ನಿನ್ನ ಸಂತೆ ಹಾದಿ ನೀನು ಹಿಡಿ" ಎಂದು ನರಿ ಹೇಳಿ ಓಟ ಕಿತ್ತಿತು. ಶೆಟ್ಟಿ ಬದುಕಿದೆಯಾ ಬಡ ಜೀವವೆ ಎಂದು ಸಂತೆ ಹಾದಿ ಹಿಡಿದ.*

**ಆಕರ: ಕಂಡು ಕೇಳಿದ ಕಥೆಗಳು**
**ಲೇಖಕರು: ಡಾ. ಮೀರಾಸಾಬಿಹಳ್ಳಿ ಶಿವಣ್ಣ**
**ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು**

**ಆಲೋಚಿಸು:**

* ಅಪ್ಪಣ್ಣಶೆಟ್ಟಿಯ ಸಹಾಯ ಪಡೆದ ಮೊಸಳೆ ಸುಮ್ಮನಿದ್ದಿದ್ದರೆ ಏನಾಗುತ್ತಿತ್ತು?

# ಹುಲಿ ಮತ್ತು ಬಿರುಗಾಳಿ

(ಆಫ್ರಿಕಾದ ಒಂದು
ಜನಪದ ಕಥೆ)



ಖುಷಿ ಓದಿಗಾಗಿ



**ಒ**ಂದಾನೊಂದು ಕಾಲದಲ್ಲಿ, ಒಂದು ಸಲ ಆಫ್ರಿಕಾದಲ್ಲಿ ದೊಡ್ಡ ಬರ ಬಿದ್ದಿತು. ತಿನ್ನೋದಕ್ಕೆ ಕೂಳಿಲ್ಲ, ಕುಡಿಯೋದಕ್ಕೆ ನೀರಿಲ್ಲ. ಕಾಡಿನ ಪ್ರಾಣಿಗಳೆಲ್ಲ ಕಂಗಾಲಾಗಿದ್ದವು.

ಅಂಥಾ ಸಮಯದಲ್ಲೂ ಅದು ಹೇಗೋ ಕಾಡಿನ ಮಧ್ಯ ಒಂದು ರಸಭರಿತ ಹಣ್ಣಿನ ಮಾವಿನ ಮರ ಉಳಿದುಕೊಂಡಿತ್ತು! ಆದರೆ, ಅದರ ಕೆಳಗೆ ಒಂದು ಹುಲಿ ಸದಾ ಅಮರಿಕೊಂಡಿರುತ್ತಿತ್ತು.

ತುಂಬಾ ಸ್ವಾರ್ಥಿ ಆ ಹುಲಿ. ಮರದ ಹತ್ತಿರ ಯಾರನ್ನು ಬರಗೊಡುತ್ತಿರಲಿಲ್ಲ. ಯಾರಾದರೂ ಹತ್ತಿರ ಹೋದರೆ, "ಗುರ್ರ್ ರ್ರ್ ರ್ರ್....ದೂರಹೋಗು, ಹತ್ತರ ಬಂದ್ರೆ ತಿಂದ್ ಹಾಕಿಬಿಡತೇನೆ" ಅಂತ ಭಯ ಪಡಿಸ್ತಿತ್ತು.

ಪರಿಸ್ಥಿತಿ ಹಿಗಿದ್ದಾಗ, ಎಲ್ಲ ಪ್ರಾಣಿಗಳು ಮೊಲದ ಹತ್ತಿರ ಹೋಗಿ,"ಹುಲಿ ತುಂಬಾ ಸ್ವಾರ್ಥಿ ಇದೆ. ಇಂಥಾ ಕಷ್ಟದ ಕಾಲದಲ್ಲೂ ಆ ಹಣ್ಣುಗಳನ್ನು ತಿನ್ನೋಕೆ ನಮಗಾರಿಗೂ ಬಿಡತಾ ಇಲ್ಲಾ, ನಾವು ನೋಡಿದರೆ ಇಲ್ಲಿ ದಿನಾಲು ಸಾಯತಾ ಇದ್ದೇವೆ" ಎಂದು ಕಷ್ಟ ತೋಡಿಕೊಂಡವು.

ಮೊಲ ಸ್ವಲ್ಪ ಹೊತ್ತು ಯೋಚನೆ ಮಾಡಿ "ಎಲ್ಲ ಇಲ್ಲಿ ಬನ್ನಿ, ನಾನ್ ಹೇಳಿದ ಹಾಗೆ ಮಾಡಿ. ಎಲ್ಲ ಸರಿ ಹೋಗತ್ತೆ" ಎಂದು ಅವುಗಳ ಕಿವಿಯಲ್ಲಿ ಏನೋ ಉಪಾಯ ಹೇಳಿತು.

ಮೊಲದ ಉಪದೇಶದಂತೆ, ಮರುದಿನ ಎಲ್ಲ ಪ್ರಾಣಿಗಳೂ ರಸಪೂರಿ ಮಾವಿನಮರದ ಬಳಿ ಮೆಲ್ಲಮೆಲ್ಲನೇ ಹೋಗಿ, ಸುತ್ತಮುತ್ತಲ ಮರ, ಪೊದೆ, ಟೊಂಗೆ, ಅಲ್ಲಿ ಇಲ್ಲಿ ಅಡಗಿ ಕುಳಿತವು. ಅನಂತರ ಮೊಲ ಒಂದು ಹಗ್ಗ ಹಿಡಿದುಕೊಂಡು ಮರದ ಹತ್ತಿರ ಹೋಗಿ, “ಅಯ್ಯೋ ದೇವರೇ” ಎಂದು ಜೋರಾಗಿ ಅರಚಿತು.

ನಿದ್ರಿಸುತ್ತಿದ್ದ ಹುಲಿ ಅರೆಕಣ್ಣು ತೆಗೆದು “ಯಾಕೆ ಬಡಕೋತ್ತಿದ್ದೀಯ? ಕಣ್ಣು ಕಾಣಿಸಲ್ಲವಾ? ನಾನು ಮಲಗಿಕೊಂಡಿದ್ದೀನಿ” ಎಂದು ರೇಗಿತು.

ಅದಕ್ಕೆ ಮೊಲ, "ಕಾಣಿಸತ್ತಣ್ಣಾ, ಆದರೆ, ನೀನು ಈ ಕೂಡಲೇ ಇಲ್ಲಿಂದ ಓಡಿ ಹೋದರೆ ಒಳ್ಳೆಯದು! ಇನ್ನು ಕೆಲವೇ ಕ್ಷಣಗಳಲ್ಲಿ ದೊಡ್ಡ ಬಿರುಗಾಳಿ ಬೀಸತ್ತೆ." ಎಂದು ಭಯಪಡಿಸಿತು.

ಮೊಲ ಹೀಗೆ ಹೇಳುತ್ತಿದ್ದಂತೆ ಸುತ್ತಲೂ ಅಲ್ಲಲ್ಲಿ ಅಡಗಿ ಕುಳಿತಿದ್ದ ಪ್ರಾಣಿಗಳೆಲ್ಲ, ಮೊಲ ಹೇಳಿಕೊಟ್ಟ ಉಪಾಯದಂತೆ, "ದೇವರೇ, ಕಾಪಾಡು, ಕಾಪಾಡು" ಅಂತೆಲ್ಲ ಗಲಾಟೆ ಮಾಡತೊಡಗಿದವು. ಆ ಗಲಾಟೆ ಕೇಳಿ, ಹುಲಿಗೂ ಭಯ ಶುರುವಾಯಿತು.

“ಮೊಲವೇ, ನಾನೇನ್ ಮಾಡ್ಲಿ? ನನ್ನ ಪ್ರಾಣ ಉಳಿಸಿಕೊಳ್ಳಬೇಕು ನಾನು. ಬೇಗ ಹೇಳು ಏನಾದರೊಂದು ಉಪಾಯ” ಎಂದು ಅಂಗಲಾಚಿತು.

“ನಾನೇನೂ ಮಾಡೋಕೆ ಆಗಲ್ಲ. ನನಗೆ ಬಹಳ ಕೆಲಸ ಇದೆ. ಪಾಪ, ಭಯದಿಂದ ಕಂಗಾಲಾಗಿರೋ ಆ ಪ್ರಾಣಿಗಳನ್ನೆಲ್ಲ ಈ ಹಗ್ಗದಿಂದ ಕಟ್ಟಬೇಕು. ಅಂದರೆ, ಎಂಥದೇ ಬಿರುಗಾಳಿ ಬೀಸಿದರೂ ಅವು ಹಾರಿ ಹೋಗಲ್ಲ” ಎಂದಿತು.

“ಹಾಗಾದರೆ, ನನ್ನನ್ನೇ ಮೊದಲು ಕಟ್ಟಿಹಾಕು” ಎಂದು ಹುಲಿ

ಕೇಳಿಕೊಂಡಿತು. ಅದಕ್ಕೆ ಮೊಲ, "ಇಲ್ಲಣ್ಣ, ನಿನ್ನ ಕಟ್ಟಿಹಾಕಿದರೆ ಉಳಿದವುಗಳ ಗತಿ ಏನು? ನೀನಾದರೆ, ತುಂಬ ಗಟ್ಟಿಗ. ನಿನ್ನ ಕಾಲುಗಳಲ್ಲಿ ಬಹಳ ಶಕ್ತಿ ಇದೆ. ನೀನು ಜೋರಾಗಿ ಓಡಿಹೋಗಿ ನಿನ್ನ ಪ್ರಾಣ ಉಳಿಸಿಕೋತಿಯ!" ಎಂದು ಹೇಳಿತು.

"ಜಾಸ್ತಿ ಮಾತಾಡಬೇಡ. ನೀನು ನನ್ನನ್ನೇ ಕಟ್ಟಬೇಕು. ಇಲ್ಲಾಂದ್ರೆ, ಸಿಗದ ಹಾಕಿ ಬಿಡತೀನಿ ನೋಡು" ಎಂದು ಹುಲಿ ಘರ್ಜಿಸಿತು."ಆಯಿತು ಬಿಡಣ್ಣ. ಯಾಕೆ ಕೋಪ?" ಎನ್ನುತ್ತ ಮೊಲ, ಅದೇ ಮರಕ್ಕೆ ಹುಲಿಯನ್ನು ಬಲವಾಗಿ ಕಟ್ಟಿತು.

ಅನಂತರ, “ಗೆಳೆಯರೇ, ಎಲ್ಲ ಬನ್ನಿ ಇಲ್ಲಿ, ಎಲ್ಲರಿಗೂ ಅಂತ ಪ್ರಕೃತಿ ಕೊಟ್ಟಿರುವ ಹಣ್ಣನ್ನು ಎಲ್ಲರೊಂದಿಗೆ ಹಂಚಿಕೊಂಡು ತಿನ್ನೋ ಬದಲು ತಾನೊಬ್ಬನೇ ತಿನ್ನುತ್ತಿದ್ದ ಸ್ವಾರ್ಥಿ ಹುಲಿಯನ್ನು ಕಟ್ಟಿಹಾಕಿದ್ದೇನೆ, ನೋಡಿ” ಎಂದು ಕೂಗಿ ಕರೆಯಿತು.

ಪ್ರಾಣಿಗಳೆಲ್ಲ ಹೊರಗೆ ಬಂದವು. ಮತ್ತೆ ಮೊಲ,“ ಎಲ್ಲರಿಗೊಸ್ಕರ ಅಂತ ದೇವರು ಕೊಟ್ಟಿರೋದನ್ನ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳೋ ಹಕ್ಕು ಯಾರಿಗೂ ಇಲ್ಲ. ಬನ್ನಿ ಈ ಹಣ್ಣುಗಳನ್ನೇಲ್ಲ ತಿನ್ನಿ” ಎಂದು ಹೇಳಿತು.

ಅದನ್ನು ಕೇಳಿ, ಪ್ರಾಣಿ ಪಕ್ಷಿಗಳೆಲ್ಲ ಸಂತಸದಿಂದ ಕುಣಿದಾಡಿದವು. ಮರದಿಂದ ಹಣ್ಣುಗಳನ್ನು ಬೀಳಿಸಿ ಕಿತ್ತುಕೊಂಡು, ತಮ್ಮ ತಮ್ಮಲ್ಲೆಲ್ಲ ಹಂಚಿಕೊಂಡು ತಿಂದವು! ನಲಿದವು! *

**ಆಕರ: ಅಂತರ್ಜಾಲ ತಾಣದಿಂದ**
**ಕನ್ನಡ ಅನುವಾದ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**

**ಆಲೋಚಿಸು:**

* ಹುಲಿ ಹಣ್ಣುಗಳನ್ನು ಹಂಚಿ ತಿಂದಿದ್ದರೆ, ಹುಲಿಯ ಮತ್ತು ಉಳಿದ ಪ್ರಾಣಿಗಳ ಸಂಬಂಧ ಹೇಗಿರಬಹುದಾಗಿತ್ತು?

# ಅತಿ ಆಸೆ ಗತಿಗೇಡು



ಖುಷಿ ಓದಿಗಾಗಿ

**ಕಾ**ಡಿನ ಅಂಚಿನಲ್ಲಿ ಒಂದು ಗೋಮಾಳವಿತ್ತು. ಹತ್ತಿರದ ಹಳ್ಳಿಗಳ ದನಕಾಯುವವರು ಅಲ್ಲಿಗೆ ತಮ್ಮ ದನ, ಕುರಿ, ಆಡುಗಳನ್ನು ಮೇಯಿಸಲು ಹೊಡೆದುಕೊಂಡು ಬರುತ್ತಿದ್ದರು. ದನಕರುಗಳು ಮೇಯುತ್ತಿದ್ದಾಗ ದನಗಾಯಿಗಳು ಬೇರೆ ಬೇರೆ ಆಟ ಆಡುತ್ತಿದ್ದರು. ಆ ಗೋಮಾಳದ ಆಚೆ

ತುದಿಯಲ್ಲಿ ಒಂದು ಹಳೆಯ ದೊಡ್ಡ ಮರವಿತ್ತು. ಅದರ ಬೊಡ್ಡೆಯಲ್ಲಿ ಒಂದು ದೊಡ್ಡ ಟೊಳ್ಳು ಇತ್ತು. ಆದರೆ ಆ ಟೊಳ್ಳಿನ ಬಾಯಿ ಮಾತ್ರ ಚಿಕ್ಕದು.

ದನಗಾಯಿಗಳು ಅದರಲ್ಲಿ ತಮ್ಮ ಬುತ್ತಿಯ ಗಂಟುಗಳನ್ನು ಇಡುತ್ತಿದ್ದರು. ಊಟದ ಸಮಯಕ್ಕೆ ಬಂದು ಟೊಳ್ಳಿನಿಂದ ತಂತಮ್ಮ ಬುತ್ತಿಯ ಗಂಟುಗಳನ್ನು ತೆಗೆದುಕೊಂಡು ಊಟ ಮಾಡುತ್ತಿದ್ದರು.

ಒಂದು ದಿನ ನರಿಯೊಂದು ಅದೇ ದಾರಿ ಬರುತ್ತಿತ್ತು. ಬುತ್ತಿಯೊಳಗಿದ್ದ ಊಟದ ವಾಸನೆ ಅದಕ್ಕೆ ಹತ್ತಿತು. ಅದನ್ನೇ ಅನುಸರಿಸುತ್ತ

ಮರದಲ್ಲಿನ ಟೊಳ್ಳನ್ನು ತಲುಪಿತು. ಚಿಕ್ಕ ಬಾಯಿಯು ಟೊಳ್ಳಿನಲ್ಲಿ ಹೆಚ್ಚು ಕಷ್ಟವಿಲ್ಲದೇ ಒಳ ಹೊಕ್ಕಿತು. ಹೊಕ್ಕಿದ್ದೇ ತಡ ಎಲ್ಲ ಬುತ್ತಿಗಂಟುಗಳಲ್ಲಿನ ಅಷ್ಟೂ ಆಹಾರವನ್ನೂ ತಾನೇ ತಿಂದುಬಿಟ್ಟಿತು. ತಿಂದು ತಿಂದು ಅದರ ಹೊಟ್ಟೆ ಡೊಳ್ಳಿನಂತೆ ಎರಡೂ ಕಡೆ ಉಬ್ಬಿತು. ಟೊಳ್ಳಿನಿಂದ ಹೊರಬರಲು ನೋಡತ್ತೇ... ಸಾಧ್ಯವಾಗಲಿಲ್ಲ!

ದನಗಾಯುವ ಹುಡುಗರು ಊಟದ ಸಮಯಕ್ಕೆ ಬಂದು ನೋಡುತ್ತಾರೆ... ನರಿ ಅವರ ಕೈಯಲ್ಲಿ ಸರಿಯಾಗಿ ಸಿಕ್ಕುಬಿದ್ದಿತು.

ನರಿಯನ್ನು ನಿಧಾನವಾಗಿ ಪೊಟರೆಯಿಂದ ಹೊರಗೆ ತಗೆದು ದನಗಾಯಿಳು, ಅದಕ್ಕೆ ಚೆನ್ನಾಗಿ ಲಾತ ಕೊಟ್ಟು ಕಳಿಸಿದರು. ದನಗಾಯಿಗಳು ಕೊಟ್ಟ ಲಾತದಿಂದ ಬುದ್ಧಿ ಕಲಿತ ನರಿ ಮತ್ತೆಂದೂ ದನಗಾಯುವ ಹುಡುಗರ ಬುತ್ತಿಯ ತಂಟೆಗೆ ಬರಲಿಲ್ಲ.*

ಆಕರ: http://kidsfront.com
ಸಂಗ್ರಹ: ಧ್ವನಿ ಸಂಪನ್ಮೂಲ ಕೇಂದ್ರ, ಧಾರವಾಡ

**ಆಲೋಚಿಸು:**

* ದನಕಾಯುವ ಹುಡುಗರು ನರಿಗೆ ಹೊಡೆತ ಕೊಟ್ಟದ್ದು ಸರಿಯೇ?
* ನರಿಗೆ ಏಟು ಕೊಡದೆಯೇ, ದನಗಾಯಿಗಳು ತಮ್ಮ ಊಟವನ್ನು ನರಿ ತಿನ್ನದ ಹಾಗೆ ಮಾಡಬಹುದಾಗಿತ್ತಾ ಆಲೋಚಿಸು!

# Ziggie Wanders off

All day long, Ziggie the little Zebra muncher sweet green grass on the big open plains of Africa.

ಮಕ್ಕಳಿಗಾಗಿ

Now Ziggie, as a rule, did as he was told and stayed close by his mother.

But one very hot afternoon, Ziggie felt so

thirsty, he wandered off all by himself in search of a drink.

In a short while he came to a lake, and as he bent down and opened his outhe for a drink, another little zebra did too!

Ziggie tossed his head, and so did the other little zebra.

Ziggie wiggled his ears, and the other little zebra did the same.

"Stop copying me!" shouted Ziggie, but the other little Zebra just stared back.

Then came a lot of giggling and laughing, and all the young animals standing around were very amused…

"Your new Zebra frind can't speak back," giggled a baby hippo.

"You've been talking to your own reflection, Ziggie!" The little animals burst out laughing once more.

"Don't worry!" smiled a young giraffe. "We've all made the same mistake. Lots of us come to drink at this lake twice a day, so you need never be short of new friends!"

**ಆಕರ: 50 BEDTIME STORIES**
**ಲೇಖಕರು: Ann Mckie**
**ಪ್ರಕಾಶಕರು:**
**randreams Limited, London.**

# New words

Wander - ಅಲೆದಾಡು

Drink - ಕುಡಿ

Lake - ಕೆರೆ

Little - ಸ್ವಲ್ಪ

Wiggle - ಅಲುಗಾಡಿಸು

Twice - ಎರಡು ಬಾರಿ

Smile - ಮುಗುಳುನಗು

Giggl - ಮುಸುಮುಸು ನಗು

### ನಮ್ಮ ಮಹದಾಶಯ:

ಕಥಾಮಂಟಪದಲ್ಲಿನ ಕಥೆಗಳನ್ನು ಓದಿ ನಿಮಗೆ ತುಂಬಾ ಖುಷಿಯಾಗುತ್ತಿದೆ, ಅಲ್ಲವೆ? ಕಥೆಗಳ ಕೊನೆಯಲ್ಲಿ ಅವುಗಳ ಆಕರಗಳನ್ನೂ ಕೊಡಲಾಗಿರುತ್ತದೆ. ಆ ಪುಸ್ತಕಗಳನ್ನು ಕೊಂಡು ಅಥವಾ ಗ್ರಂಥಾಲಯದಿಂದ ಎರವಲು ಪಡೆದು ಇನ್ನೂ ಹೆಚ್ಚಿನ ಕಥೆಗಳನ್ನು ಓದಿ ಆನಂದಿಸಲು ಸಾಧ್ಯವಾಗಲಿ ಎಂಬ ಮಹದಾಶಯ ನಮ್ಮದು. ಸಾಧ್ಯಮಾಡಿಕೊಂಡು ಮೂಲ ಲೇಖಕರಿಗೆ ಪತ್ರ ಬರೆದು ನಿಮ್ಮ ಖುಷಿಯನ್ನು ಹಂಚಿಕೊಳ್ಳುವುದು ಇನ್ನೂ ಒಳ್ಳೆಯದು.

**ಸಂಪರ್ಕ ಮಾಹಿತಿ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ ೫೮೦ ೦೦೭**
**ಮೊ: ೯೪೮೬೬ ೬೧೦೫೫**
**dhwanitrust@gmail.com**
**www. dhwanitrust.org**

ಗಮನಿಸಿ: ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶಗಳಿಗಾಗಿ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.